'**Flowering Judas**'ನಲ್ಲಿ ಬರುವ ಸಾವಿನ ದರ್ಶನ. ಅವಳು ಮತ್ತೆ ಬದುಕನ್ನು ಎದುರಿಸಲು ಸಾಧ್ಯವಿರಲಿಲ್ಲ. ಅವಳು ಬೇರೇನು ತಾನೇ ಮಾಡಲು ಸಾಧ್ಯ ಎನ್ನುವುದು ನಾನು ಯೋಚಿಸಿದ್ದ ಅಂತ್ಯ. ಪ್ರತಿಕಾರ ಮನೋಭಾವವು ಕನಸಿನಲ್ಲಿ ಪ್ರಕಟವಾಗಿ ಅವಳನ್ನು ಸಾವಿನತ್ತ ಒಯ್ಯುತ್ತದೆ. ಆದರೆ, ಅವಳು "ಇಲ್ಲ!" ಎಂದು ಕಿರುಚಿಕೊಂಡು ಎದ್ದವಳು ಮತ್ತೆ ಮಲಗಲು ಹೆದರುತ್ತಾಳೆ ಬರೆಯುವವರೆಗೂ ಅದರ ಅಂತ್ಯ ಹೀಗಾಗುವುದು ಅಂತ ಗೊತ್ತಿರಲಿಲ್ಲ.

**◆ ಅದು "ಸತ್ಯ" ಕತೆಯಲ್ಲವೆ?**

ಇಲ್ಲಿಯವರೆಗೂ ನಿಜವಾದ ಮನುಷ್ಯರ ಅನುಭವವಲ್ಲದ, ಅಂತಹ ಬುನಾದಿಯಿಲ್ಲದ ಕತೆಯನ್ನು ಬರೆದಿಲ್ಲ. ಆ ಅನುಭವ ಸಾಮಾನ್ಯವಾಗಿ ಬೇರೆಯವರದು ಆಗಿರಬಹುದು. ಆದರೆ, ಆ ಕತೆಯನ್ನು ಕೇಳಿದಾಗ, ಇಲ್ಲವೇ ಅದಕ್ಕೆ ಸಾಕ್ಷಿಯಾದಾಗ ಅದು ನನ್ನದೇ ಅನುಭವವಾಗುತ್ತದೆ. ಅದೊಂದು ಸಾವಯವ ಸಂಗತಿ. ಆ ಕತೆ ನನ್ನೊಳಗೆ ವರ್ಷಾಂತರಗಳಿಂದ ಇತ್ತು. ಮೆಕ್ಸಿಕೋದಲ್ಲಿ ನಡೆದ ಚಿಕ್ಕ ಘಟನೆಯಿಂದ ಅದು ಹೊರಕ್ಕೆ ಬಂದಿತು. ಒಂದು ರಾತ್ರಿ ಮನಸ್ಸಿನಲ್ಲಿ ಏನೋ ಒದ್ದಾಟ. ಸ್ನೇಹಿತರು ಆಟಕ್ಕೆ ಬರಲು ಒತ್ತಾಯಿಸುತ್ತಿದ್ದರು. ಆದರೆ, ನಾನು ಹೋಗಲಿಲ್ಲ. ಕತೆ ಬರೆಯುವ ಸಮಯ ಬಂದಿದೆಯೆಂದು ಅನ್ನಿಸಿತು.

**◆ ಕತೆ ಬೆಳೆಯಲು ಕಾರಣವಾದ "ಆ ಚಿಕ್ಕ ಘಟನೆ" ಏನು?**

ಒಂದು ಸಂಜೆ ಕಿಟಕಿಯ ಕಡೆಯಿಂದ ಹಾದುಹೋಗುವಾಗ ಏನೋ ನೋಡಿದೆ. ನನ್ನ ಪರಿಚಯದ ಹುಡುಗಿಯೊಬ್ಬಳು ಅವಳನ್ನು ನೋಡಲು ಯಾರೋ ಒಬ್ಬಾತ ಬರುತ್ತಿದ್ದಾನೆಂದು ಜೊತೆಯಲ್ಲಿರು ಬಾ ಎಂದು ಕರೆದಿದ್ದಳು. ಅವಳಿಗೆ ಅವನನ್ನು ಕಂಡರೆ ಭಯ. ಅಂಗಳದ ಮೂಲಕ ಹಾದುಹೋಗುವಾಗ ಕಿಟಕಿಯ ಮೂಲಕ ಹೂಬಿಟ್ಟಿದ್ದ ಜುದಾಸ್ ಮರವನ್ನು ನೋಡಿದೆ. ಅಲ್ಲಿ ಅವಳು ತೊಡೆಯ ಮೇಲೆ ತೆರೆದ ಪುಸ್ತಕವೊಂದನ್ನು ಇಟ್ಟುಕೊಂಡು ಕೂತಿದ್ದಳು. ಆಕೆಯ ಪಕ್ಕ ಆ ದೊಡ್ಡ ಆಕೃತಿಯ ವ್ಯಕ್ತಿ ಕೂತಿದ್ದ. ನಾನು ಮತ್ತು ಮೇರಿ ಸ್ನೇಹಿತೆಯರು. ಮೆಕ್ಸಿಕೊದ ಇಂಡಿಯನ್ ಸ್ಕೂಲಿನಲ್ಲಿ ಅವಳು ಪಾಠ ಮಾಡುತ್ತಿದ್ದಳು. ನಾನು ಹುಡುಗಿಯರ ಟೆಕ್ನಿಕಲ್ ಸ್ಕೂಲಿನಲ್ಲಿ ಪಾಠಮಾಡುತ್ತಿದ್ದೆ.

ಆ ಸಂಜೆ ಕಿಟಕಿಯ ಮೂಲಕ ನೋಡಿದಾಗ ಮೇರಿಯ ಮುಖದಲ್ಲಿ, ಅವಳು ಕೂತ ಭಂಗಿಯಲ್ಲಿ, ಆ ಇಡೀ ಸನ್ನಿವೇಶದಲ್ಲಿ ನನಗೇನೋ ಕಂಡಿತು. ಅದು ಮನಸ್ಸನ್ನು ತಲ್ಲಣಗೊಳಿಸಿತು. ಆ ಕ್ಷಣದವರೆಗೆ ಆಕೆಗೆ ತನ್ನನ್ನು ತಾನು ನೋಡಿಕೊಳ್ಳುವುದು ಸಾಧ್ಯವಿಲ್ಲ ಎಂದು ನನಗರ್ಥವಾಗಿರಲಿಲ್ಲ. ಅವಳಿಗೆ ಎಲ್ಲ ವಿಷಯಗಳ ಕುರಿತು ಭಯವಿತ್ತು. ಆಕೆಯ ಮುಖದಲ್ಲಿ ಅದು ಇಣುಕುತ್ತಿತ್ತು. ಅದನ್ನು ನಾನ್ಯಾಕೆ ನೋಡಿದೆ ಗೊತ್ತಿಲ್ಲ. ನನಗೆ ಅಂತಃಪ್ರಜ್ಞೆ (ಇನ್ಟ್ಯೂಶನ್) ಬಗ್ಗೆ ನಂಬಿಕೆಯಿಲ್ಲ. ನಿಮಗೆ ಏನಾದರೂ ಇದ್ದಕ್ಕಿದ್ದಂತೆ ಕಂಡರೆ ನಿಮ್ಮ ಮೆದುಳು ಎಂದಿಗಿಂತ ವೇಗವಾಗಿ ಕೆಲಸ ಮಾಡುತ್ತದೆ. ನಿಮಗದು ಬಹಳ ಮುಂಚಿನಿಂದಲೂ ಆ ವಿಷಯದ ಕುರಿತು ಅರಿವು ನೀಡುತ್ತಿರುತ್ತದೆ. ಅದು ಎದುರಾಗುವ ಕ್ಷಣ ಬಂದಾಗ ಅದು ಮೊದಲೇ ನಿಮಗೆ ಗೊತ್ತಿತ್ತು ಅನ್ನಿಸುತ್ತದೆ.

**◆ ಕತೆ ನಿಮ್ಮ ಮನಸ್ಸಿನಲ್ಲಿ "ರೂಪುಗೊಳ್ಳುವ" ಕುರಿತು ಹೇಳಿದಿರಿ. ಅದು ದೃಶ್ಯವಾಗಿ ಆರಂಭವಾಗಿ ಆಮೇಲೆ ಕತೆಯಾಗುತ್ತದೆಯೋ ಹೇಗೆ?**

ನನ್ನ ಇಂದ್ರಿಯಗಳೆಲ್ಲ ಬಲುಸೂಕ್ಷ್ಮ. ಕಣ್ಣಿನ ಮೂಲಕ ಪ್ರವೇಶವಾದರೂ ಇಂದ್ರಿಯಗಳೆಲ್ಲ ಒಟ್ಟಾಗಿ ಅದನ್ನು ಹಿಡಿಯುತ್ತವೆ. ಒಂದೇ ಕ್ಷಣ ರಪ್ ಅಂತ ಬಂದು ಬಡಿಯುತ್ತದೆ, ಅಷ್ಟೇ. ಕೆಲವು